ಇ) ಪ್ರಸಕ್ತ ಸಾಲಿನ (1992-93) ಆಯವ್ಯಯದಲ್ಲಿ ಪೂರ್ವಭಾವಿ ಕೆಲಸಗಳಿಗಾಗಿ 30 ಲಕ್ಷ ರೂ.ಗಳನ್ನು ಒದಗಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ತಾ।। 22.3.93ರ ಲಿಖಿತ ಮೂಲಕ ಉತ್ತರಿಸಿರುವ 24ನೇ ಪಟ್ಟಿಯಲ್ಲಿರುವ 67 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 2161, 1663, 1952, 2126, 2200, 2195, 2228, 2250, 2251,1156, ಮತ್ತು 2052 ಪ್ರಶ್ನೆಗಳನ್ನು ಹೊರತುಪಡಿಸಿ, ಇನ್ನು ಉಳಿದ 56 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಮೂಡಿಗೆರೆ ತಾಲ್ಲೂಕು ಉಪಗ್ರಾಮಗಳಿಗೆ ವಿದ್ಯುತ್ತೀಕರಣ

242: ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಎಷ್ಟು ಉಪ ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡಲು ರೆವಿನ್ಯೂ ಆದಾಯ ಕಡಿಮೆಯಿದ್ದು, 1 ಲಕ್ಷಕ್ಕೂ ಹೆಚ್ಚು ಖರ್ಚು ಆಗುತ್ತಿರುವುದರಿಂದ ವಿದ್ಯುದ್ದೀಕರಣ ಮಾಡಲಾಗುತ್ತಿಲ್ಲ;

ಆ) ಇಂತಹ ಗ್ರಾಮಗಳಿಗೆ ಸರ್ಕಾರ ವಿದ್ಯುದ್ದೀಕರಣ ಮಾಡಲು ಏನು ಕ್ರಮ ಕೈಗೊಂಡಿದೆ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಮೂಡಿಗೆರೆ ತಾಲ್ಲೂಕಿನಲ್ಲಿ 8 ಉಪ ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡಲು ರೆವಿನ್ಯೂ ಆದಾಯ ಕಡಿಮೆ ಇದ್ದು 1 ಲಕ್ಷಕ್ಕೂ ಹೆಚ್ಚು ಖರ್ಚು ಆಗುತ್ತಿರುವುದರಿಂದ ವಿದ್ಯುದ್ದೀಕರಣ ಮಾಡಲಾಗುತ್ತಿಲ್ಲ.

ಆ) ಇಂತಹ ಗ್ರಾಮಗಳನ್ನು ವಿದ್ಯುದ್ದೀಕರಣ ಮಾಡಲು ಮಂಡಳಿಯು ತನ್ನ ಸಂಪನ್ಮೂಲವನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳುವುದು.

ಮೂಡಿಗೆರೆಯಲ್ಲಿ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಸ್ಥಾಪನೆ

2004: ಶ್ರೀಮಾತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಸ್ಥಾಪನೆ ಮಾಡಿದ್ದು ಯಾವಾಗ, ಯಾವ ಉದ್ದೇಶಕ್ಕಾಗಿ ಸ್ಥಾಪನೆ ಮಾಡಲಾಯಿತು.

ಆ) ಇದರಿಂದ ಎಷ್ಟು ಲಿಫ್ಟ್ ಇರಿಗೇಷನ್ ಸ್ಕೀಮ್ ಮಂಜೂರು ಮಾಡಲಾಗಿದೆ ? ಇವುಗಳು ಯಾವ ಹಂತದಲ್ಲಿವೆ;

ಇ) ಮೂಡಿಗೆರೆ ಉದುಸೆ ಲಿಫ್ಟ್ ಇರಿಗೇಷನ್ ಯೋಜನೆಯ ಕೆಲಸವು ಪ್ರಾರಂಭಿಸದಿರಲು ಕಾರಣವೇನು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–